


ಪರಿಸರವೇ ನಮ್ಮ ಜೀವಾಳ
'ಕಾಡಿನಲ್ಲಿ ಏನು ನಡೆಯುತ್ತಿದೆ?' ಧನಂಜಯ ಜೀವಾಳ ಬಿ.ಕೆ. ಅವರ ಮುಖಪುಟ ಲೇಖನ (ಸುಧಾ ಜೂನ್ 7) ವಿಶ್ವಪರಿಸರ ದಿನ ನಿಮಿತ್ತ ಮಾರ್ಗದರ್ಶಿ ಯಾಗಿ ಮೂಡಿ ಬಂದಿದೆ. ಮನುಷ್ಯ ಪರಿಸರವನ್ನು ರಕ್ಷಿಸಿದರೆ ಪರಿಸರ ಮನುಷ್ಯ ನನ್ನು ರಕ್ಷಿಸುತ್ತದೆ. ಪರಿಸರವೇ ನಮ್ಮ ಜೀವಾಳ ಎಂಬುದು ಎಲ್ಲರೂ ತಿಳಿದಿರಬೇಕು. 'ಹೀಗೂ ಉಂಟು ಪರಿಸರ ರಕ್ಷಣೆ' (ಕೆ.ಟಿ. ಗಟ್ಟಿ) ಲೇಖನವೂ ಸೊಗಸಾಗಿದೆ. ಲೇಖಕರು ತಿಳಿಸಿದಂತೆ ಪರಿಸರ ರಕ್ಷಣೆಗಾಗಿ ಪ್ರತ್ಯೇಕ ಖಾತೆ, ಸಚಿವರು ಇರಬೇಕು.

—ಬಿ.ಎಸ್. ಸೊಲ್ಲಾಪುರೆ ಬೀದರ್,
ಕೆ.ಪಿ.ರಾಮಗುಂಡಿ ಬೈಲಹೊಂಗಲ, ಬೆಳ್ಳಾವೆ
ರಮೇಶ್ ಬೆಂಗಳೂರು, ಕೊಪಿಮ ಬಸರಕೋಡು

**ಕಾಡಿನೊಳಗೆ ಸುತ್ತಿದ ಅನುಭವ**

ಲೇಖನ ಸಕಾಲಿಕ. ಜೀವ ವೈವಿಧ್ಯದ ಆಗರವಾದ ಪಶ್ಚಿಮ ಘಟ್ಟದ ಕಾಡುಗಳನ್ನು ಅವುಗಳ ಮೂಲ ಸ್ವರೂಪದಲ್ಲಿ ನಾವು ಉಳಿಸಿಕೊಳ್ಳುವಲ್ಲಿ ವಿಫಲರಾಗುತ್ತಿದ್ದೇವೆಯೇ? ನಿಜಕ್ಕೂ ನಮ್ಮ ಕಾಡಿನೊಳಗೆ ಏನು ನಡೆಯುತ್ತಿದೆ ಎಂಬ ಪ್ರಶ್ನೆಗಳಿಗೆ ಉತ್ತರ ದೊರೆತಿದೆ. ಚಿತ್ರ–ಲೇಖನ ಕಾಡಿನೊಳಗೆ ಸುತ್ತಾಡಿಸಿದ ಅನುಭವ ನೀಡಿತು.

—ವಿ. ಹೇಮಂತ ಕುಮಾರ ಬೆಂಗಳೂರು

**ಮನೋಜ್ಞ ಬರಹ**

ವಿಚಾರ ಲಹರಿಯಲ್ಲಿ 'ದೇಶ ಮತ್ತು ಧರ್ಮ' (ಶಿಕಾಕು) ಬರಹ ಮನೋಜ್ಞವಾಗಿದೆ.

—ಸರ್ವಜಿತ ಹುಬ್ಬಳ್ಳಿ

**ಮನ ಮಿಡಿಯಿತು**

'ನಿಮ್ಮೊಡನೆ'ಯಲ್ಲಿ 'ಅಸಹಾಯಕ ಅಮ್ಮಂದಿರೂ, ನತದೃಷ್ಟ ಮಕ್ಕಳೂ' (ಎನ್.ಉದಯಕುಮಾರ್) ಬರಹ ಓದಿ ಮನಮಿಡಿಯಿತು. ನತದೃಷ್ಟ ಮಕ್ಕಳ ಮಾಹಿತಿ ತಕ್ಷಣಕ್ಕೆ ಲಭ್ಯವಿರುವುದಿಲ್ಲವೇ? ಗುರುತಿಸಲು ಆರು ವಾರಗಳು ಬೇಕಾದರೆ, ಪರಿಹಾರ ಕಾರ್ಯಕ್ಕೆಗೊಳ್ಳಲು ಎಷ್ಟು ಸಮಯ ಬೇಕಾಗಬಹುದು? ಆರೋಪ ಸಾಬೀತಾಗದ ಮಹಿಳೆಯರನ್ನು ಜೈಲಿನಲ್ಲಿಡದೆ ಗೃಹಬಂಧನ ಇಲ್ಲವೇ ರಿಮ್ಯಾಂಡ್ ಹೋಂಗಳಲ್ಲಿ ಇಡಬೇಕು.

—ಮಹಾವೀರ ಕಾಸರ, ಶಿವಮೊಗ್ಗ, ಶ್ರೀನಾಥ್
ಕೊನೇಟಿ ಬೆಂಗಳೂರು,
ಪಿ. ಜಯವಂತ ಪೈ, ಕುಂದಾಪುರ

**ದರ್ಪಣ ಸರೋವರ**

ಪ್ರವಾಸ ಪುಟದಲ್ಲಿ ನ್ಯೂಜಿಲೆಂಡಿನ 'ದರ್ಪಣ ಸರೋವರ' (ಡಾ.ಶೇಖರ್ ಗೌಳೇರ್) ಬರಹ ಮಾಹಿತಿ ಪೂರ್ಣ. 'ಗೊಂಡಾರಣ್ಯದ ಪ್ರಶಾಂತ ವಾತಾವರಣದಲ್ಲಿ ಮಿರರ್ ಲೇಕ್ಸ್‌ನ ನಿಂತ ನೀರು ಸ್ತಬ್ಧವಾಗಿತ್ತು' ಎಂಬುದನ್ನು ಓದಿ ಮನಸ್ಸು ಮುದಗೊಂಡಿತು.

—ಎಸ್. ಚನ್ನಪ್ಪ, ಮೈಸೂರು, ಪ್ರಾರ್ಥನಾ
ಹೇಮಂತಕುಮಾರ್ ಬೆಂಗಳೂರು, ಕೋಟೇಶ್ವರ
ಸೂರ್ಯನಾರಾಯಣ ರಾವ್ ಬೆಂಗಳೂರು

**ಉಪಯುಕ್ತ ಲೇಖನಗಳು**

ಆರೋಗ್ಯ ಪುಟದಲ್ಲಿ 'ಬಾವಲಿ ಜ್ವರ; ವಹಿಸೋಣ ಎಚ್ಚರ' (ಡಾ.ಮುರಲೀ ಮೋಹನ್ ಚೂಂತಾರು) ಹಾಗೂ 'ನಿರ್ದಯಿ ನಿಫಾಗೆ ಬಾವಲಿ ಬಲಿಪಶು' (ಆರ್.ಕೆ.ಮಧು), ಬಾವಲಿ ಜ್ವರದ ಬಗೆಗಿನ ಈ ಎರಡು ಲೇಖನಗಳು ಜನಸಾಮಾನ್ಯರಿಗೆ ಉಪಯುಕ್ತವಾಗಿವೆ. ಕೇರಳದಲ್ಲಿ ಹಾಗೂ ಕರಾವಳಿ ಕರ್ನಾಟಕದಲ್ಲಿ ಕೆಲವು ಪ್ರಕರಣಗಳು ವರದಿ ಆಗುವ ಹಂತದಲ್ಲಿವೆ. ಇದರಲ್ಲಿ ಬಾವಲಿಯ ತಪ್ಪೇನೂ ಇಲ್ಲ. ವೈರಾಣು ಅದರ ಮೂಲಕ ಹರಡಿದರೆ ಬಡ ಬಾವಲಿ ಏನು ಮಾಡೀತು?

—ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

**ಬಾವಲಿ ಸರದಿ**

ಒಂದೊಂದು ಕಾಯಿಲೆ ಬಂದಾಗ ಒಂದೊಂದು ಪ್ರಾಣಿಗಳನ್ನು ಕೊಲ್ಲುತ್ತಾ ಬಂದಿದ್ದೇವೆ. ಸೊಳ್ಳೆ, ಕೋಳಿ, ಹಂದಿ, ಇಲಿ.. ಈಗ ಬಾವಲಿ ಸರದಿ. ಮನುಷ್ಯನಿಂದ ಯಾವುದಾದರೂ ಕಾಯಿಲೆ ಬಂದರೆ ಮನುಷ್ಯನನ್ನು ಕೊಲ್ಲುವರೇ?

—ಎ.ಪಿ. ರಂಗನಾಥ ಮೈಸೂರು

**ಹೆಣ್ಣುಮಕ್ಕಳಿಗೆ ಸಲಹೆ**

'ಹೆಣ್ಣು ಒಂಟಿಯಾಗಿರುವುದು ತಪ್ಪಾ?' (ಡಾ.ಲೀಲಾವತಿ ದೇವದಾಸ್) ಒಂಟಿ ಹೆಣ್ಣಿನ ಬಾಳ್ವೆ ಬಗ್ಗೆ ಹಾಗೂ ಅವರ ಕಷ್ಟಕಾರ್ಪಣ್ಯದ ಬಗ್ಗೆ ವಿವರಿಸಿ, ಅದರ ಪರಿಹಾರ ಸೂಚಕವಾಗಿ ಅನೇಕ ಉಪಯುಕ್ತ ಸಲಹೆಗಳನ್ನು ನೀಡಿ ಉಪಕರಿಸಿದ್ದಾರೆ. ಇದನ್ನು ಅನುಸರಿಸಿದರೆ ಮಹಿಳೆಯರಿಗೇ ಕ್ಷೇಮ.

—ಎ.ಕೆ. ಅನಂತಮೂರ್ತಿ, ಸುಂದರ್
ಬೆಂಗಳೂರು, ಮೀನಾಕ್ಷಿ ಕೆ. ರಾಮಗುಂಡಿ
ಬೈಲಹೊಂಗಲ

**ಎಂದೂ ಮುಗಿಯದ ಕಥೆ**

ಹೆಣ್ಣಿನ ಕುರಿತ ಲೇಖನ ಸಾಕಷ್ಟು ಬೆಳಕು ಚೆಲ್ಲಿದೆ. ನಮ್ಮ ದೇಶದ ಎಲ್ಲ ರಾಜ್ಯಗಳಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಂಪುಟ ದರ್ಜೆ ಮಂತ್ರಿಗಳಿರಬೇಕು. ಒಂಟಿ ಹೆಣ್ಣಿನ ಬಗ್ಗೆ ನಮ್ಮ ಸಮಾಜದ ಧೋರಣೆ ಬದಲಾಗಬೇಕಿದ್ದು ಇರುವ ಕಾನೂನುಗಳಿಗೇ ತಿದ್ದುಪಡಿ ತರಬೇಕು. 'ಅನ್ನೋ ಹಾಗಿಲ್ಲ, ಅನುಭವಿಸೋ ಹಾಗಿಲ್ಲ' ಎಂಬುದು ಎಲ್ಲ ಮನೆಗಳ ದುಸ್ಥಿತಿ ಆಗಿದೆ!

—ರಾಜಶೇಖರ ಹಾದಿಮನಿ ಧಾರವಾಡ

**ಕಥೆ ಚೆನ್ನಾಗಿತ್ತು**

'ಚಪ್ಪಲಿ ಕಳ್ಳ' ಕಥೆ (ಗಂಗಾಧರಯ್ಯ ಎಸ್. ಕೆಂಗಟ್ಟೆ) ಚೆನ್ನಾಗಿತ್ತು. ಹಾಸ್ಯಭರಿತವೂ ಆಗಿತ್ತು.

—ರತ್ನಾಕರ ಹೆಗಡೆಕಟ್ಟೆ ಮೂಡುಬಿದಿರೆ

**ಬೋಧಪ್ರದ**

'ಎಳೆಯರ ಅಂಗಳ'ದ ಕವನ; 'ಆರೋಗ್ಯದ ಗುಟ್ಟು' ( ಸಿ.ಎನ್. ಮುಕ್ತಾ) ಚಿಕ್ಕಮಕ್ಕಳಿಗೆ ಬೋಧಪ್ರದವಾಗಿದೆ.

—ನಾರಾಯಣ ಯಾಜಿ ಶಿರಾಲಿ

**ವಾಸ್ತವಾಂಶಗಳ ಅನಾವರಣ**

'ಹರೆಯದ ಮಕ್ಕಳನ್ನು ಕಡೆಗಣಿಸಬೇಡಿ' (ಪ.ನಾ.ಹಳ್ಳಿ. ಹರೀಶ್ ಕುಮಾರ್) ಲೇಖನ ಸದ್ಯದ ವಾಸ್ತವ ಅಂಶಗಳನ್ನು ತೆರೆದಿಟ್ಟಿದೆ.

—ಕೊಮೆರ್ಲ ಸತ್ಯನಾರಾಯಣ ಬೆಂಗಳೂರು

**ನಯನ ಮನೋಹರ**

'ಕಾನನದ ನಡುವೆ ಕಣ್ಸೆಳೆವ ಒಣಚಲು ಜಲಧಾರೆ' (ಯಜಾಸ್ ದುದ್ದಿಯಂಡ) ಲೇಖನ ಖುಷಿ ಕೊಟ್ಟಿತ್ತು. ಜಲಧಾರೆಯ ನೋಟ ನಯನ ಮನೋಹರವಾಗಿದೆ.

—ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

**ಮೋಡಿ ಮಾಡಿದೆ**

'ಪಕ್ಷಿಲೋಕ'ದಲ್ಲಿ 'ಹಸಿರು ಪಾರಿವಾಳ' (ಪ್ರಕಾಶ ಎಸ್. ಮನ್ನಂಗಿ) ಸಚಿತ್ರ ಲೇಖನ ಮೋಡಿ ಮಾಡಿದೆ.

—ಎಂ.ಬಿ. ಕೃಷ್ಣಮೂರ್ತಿ ಬೆಂಗಳೂರು




